ಸಾಕ್ಷಿಯನ್ನು ದಿನಾಂಕ **06-07-2023** ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ಶ್ರೀ ಆರ್ ಕೆ ವಿ ವಕೀಲರಿಂದಃ

(ಸಾಕ್ಷಿಗೆ ಕನ್ನಡ, ಇಂಗ್ಲೀಷ್ ಓದಲು ಮತ್ತು ಬರೆಯಲು ಮತ್ತು ಮಾತನಾಡಲು ಬರುವುದಿಲ್ಲ. ತೆಲುಗು ಭಾಷೆ ಓದಲು, ಬರೆಯಲು ಮತ್ತು ಮಾತನಾಡಲು ಬರುತ್ತದೆ ಎಂದು ಹೇಳಿದ್ದರಿಂದ ಭಾಷಾಂತರಣಕಾರರಾಗಿ ಚಿಂತಾಮಣಿ ವಕೀಲರ ಸಂಘದ ವಕೀಲರಾದ ಶ್ರೀಮತಿ ಬಿ ಹೆಚ್ ಎಲ್ ರವರನ್ನು ಭಾಷಾಂತರಣಕಾರರಾಗಿ ವಾದಿಯ ಖರ್ಚಿನಲ್ಲಿ ನೇಮಿಸಿಕೊಳ್ಳಲಾಯಿತು.)

ಭಾಷಾಂತರಕಾರರಿಗೆ ಪ್ರಮಾಣ ವಚನ ಭೋದಿಸಲಾಯಿತು

ನಾನು, ಪ್ರತಿವಾದಿ ಮತ್ತು ನನ್ನ ತಂದೆ ಒಟ್ಟು ಕುಟುಂಬದಲ್ಲಿ ವಾಸವಾಗಿದ್ದೇವೆ ಎಂದು ತೋರಿಸಲು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನನ್ನ ತಂದೆಗೆ ಐದು ಸಹೋದರರು. ನನ್ನ ತಂದೆ ಐದು ಜನ ಸಹೋದರರು ವಿಭಾಗ ಮಾಡಿಕೊಂಡಿದ್ದಾರೆ, ಯಾವಾಗ ಮಾಡಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. 60-70 ವರ್ಷಗಳ ಹಿಂದೆ ಆ ವಿಭಾಗ ಮಾಡಿಕೊಂಡಿದ್ದಾರಾ ಎಂದರೆ ನನಗೆ ಗೊತ್ತಿಲ್ಲ.

2. ನನ್ನ ತಂದೆಯ ಸಹೋದರರ ನಡುವೆ ಆದ ವಿಭಾಗದಲ್ಲಿ ಸ.ನಂ.56 ರಲ್ಲಿ ಒಟ್ಟು 5 ಎಕರೆ 32 ಗುಂಟೆ ಪೈಕಿ ತಲಾ 1 ಎಕರೆ 6 ಗುಂಟೆ ಜಮೀನು ಒಬ್ಬೊಬ್ಬ ಸಹೋದರರಿಗೆ ಬಂದಿರುತ್ತದೆ ಎಂದರೆ ಸರಿ. ನನ್ನ ತಂದೆಗೆ ನಾನು ಮತ್ತು ಪ್ರತಿವಾದಿ ಇಬ್ಬರು ಗಂಡು ಮಕ್ಕಳು ಮತ್ತು ನಾಲ್ಕು ಜನ ಹೆಣ್ಣು ಮಕ್ಕಳು ಇರುತ್ತಾರೆ. ಆ ನಾಲ್ಕು ಜನ ಹೆಣ್ಣು ಮಕ್ಕಳ ಹೆಸರು ವೆಂಕಟಮ್ಮ, ಬೈಯ್ಯಮ್ಮ, ವೆಂಕಟಮ್ಮ ಮತ್ತು ಮುನಿಯಮ್ಮ ಆಗಿರುತ್ತದೆ. ನನ್ನ ಸಹೋದರಿಯರನ್ನು ಈ ಕೇಸಿನಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ.

3. ನಿಮ್ಮ ಹೆಸರಿನಲ್ಲಿ, ನಿಮ್ಮ ತಂದೆಯ ಹೆಸರಿನಲ್ಲಿ ಮತ್ತು ಪ್ರತಿವಾದಿಯ ಹೆಸರಿನಲ್ಲಿರುವ ಎಲ್ಲಾ ಆಸ್ತಿಗಳನ್ನು ಈ ಕೇಸಿನಲ್ಲಿ ಸೇರಿಸಿದ್ದೀರಾ ಎಂದರೆ ಸಾಕ್ಷಿ ಚಿಕ್ಕ ಬುಜ್ಜಣ್ಣ ಆಸ್ತಿಗಳನ್ನು ಮಾತ್ರ ಈ ಕೇಸಿನಲ್ಲಿ ಸೇರಿದ್ದೇನೆ ಎಂದು ನುಡಿಯುತ್ತಾರೆ ನನ್ನ ಹೆಸರಿನಲ್ಲಿರುವ,

ನಮ್ಮ ತಂದೆಯ ಹೆಸರಿನಲ್ಲಿ ಮತ್ತು ಪ್ರತಿವಾದಿಯ ಹೆಸರಿನಲ್ಲಿರುವ ಆಸ್ತಿಗಳನ್ನು ಈ ಕೇಸಿನಲ್ಲಿ ಸೇರಿಸಿಲ್ಲ. ನನ್ನ ತಂದೆಯನ್ನು ವೆಂಕಟಬೋವಿ ಅಲಿಯಾಸ್ ಚಿಕ್ಕವೆಂಕಟಸ್ವಾಮಿ ಬೋವಿ ಅಲಿಯಾಸ್ ಚಿಕ್ಕಬುಜ್ಜಣ್ಣ ಎಂದು ಕರೆಯುತ್ತಾರೆ ಎಂದರೆ ಸರಿ.

4. ಕೆಲವು ವರ್ಷಗಳಿಂದ ನಾನು ಮತ್ತು ಪ್ರತಿವಾದಿ ಬೇರೆ ಬೇರೆ ವಾಸವಾಗಿದ್ದೇವೆ ಎಂದು ಈ ಕೇಸಿನಲ್ಲಿ ಹೇಳಿದ್ದೇನೆ ಎಂದರೆ ಸರಿ. ನಾನು ಮತ್ತು ಪ್ರತಿವಾದಿ 10 ವರ್ಷಗಳಿಂದ ಬೇರೆ ಬೇರೆ ಇದ್ದೇವೆ. ನಾನು ಮತ್ತು ಪ್ರತಿವಾದಿ 10 ವರ್ಷಗಳಿಂದ ಬೇರೆ ಬೇರೆ ವಾಸವಾಗಿದ್ದೇವೆ ಎಂಬ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. 5 ಆಸ್ತಿಗಳಿಗೆ ಸಂಬಂಧಿಸಿದಂತೆ ಈ ದಾವೆಯನ್ನು ಸಲ್ಲಿಸಿದ್ದೇನೆ. ಆ ಐದು ಆಸ್ತಿಗಳು ನಮ್ಮ ಕುಟುಂಬಕ್ಕೆ ಯಾವ ರೀತಿ ಬಂದಿದ್ದವು ಎಂದರೆ ಸಾಕ್ಷಿ ಕೆಲವು ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಯಾವ ದಾಖಲೆಯನ್ನು ಹಾಕಿದ್ದೇನೆ ಮತ್ತು ಯಾವ ದಾಖಲೆಯನ್ನು ಹಾಜರುಪಡಿಸಿದ್ದೇನೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ 5 ಆಸ್ತಿಗಳು ಯಾರಿಂದ ಯಾರ ಹೆಸರಿಗೆ ಯಾವ ದಾಖಲೆಯ ಮೂಲಕ ಬಂದಿದ್ದವು ಎಂದು ಹೇಳಲಾಗುವುದಿಲ್ಲ.

5. ಪ್ರತಿವಾದಿ 1965 ರಲ್ಲಿಯೇ ನಮ್ಮ ಕುಟುಂಬದಿಂದ ಬೇರೆ ಹೋಗಿದ್ದೆ, ನಾನು ಮತ್ತು ನನ್ನ ತಂದೆ ಮಾತ್ರ ಕುಟುಂಬದಲ್ಲಿ ಇದ್ದೇವು ಎಂದರೆ ಸಾಕ್ಷಿ 1965 ರಲ್ಲಿ ಪ್ರತಿವಾದಿಗೆ ಮದುವೆಯಾಗಿರಲಿಲ್ಲ, ಮದುವೆಯಾದ ನಂತರ ಪ್ರತಿವಾದಿ ಕುಟುಂಬದಿಂದ ಬೇರೆ ಹೋಗಿರುತ್ತಾರೆ .

6. ದಾವಾ ಐಟಂ.ನಂ.3 ರಲ್ಲಿ ಪ್ರತಿವಾದಿ ಗುಡಿಸಲನ್ನು ಹಾಕಿಕೊಂಡು ಅಲ್ಲಿಯೇ ವಾಸವಾಗಿದ್ದರು ಎಂದರೆ ಸುಳ್ಳು ದಾವಾ ಐಟಂ.ನಂ.1 ರ ಅರ್ಧ ಆಸ್ತಿಯ ಸ್ವಾದೀನದಲ್ಲಿ

ನಾನು, ಉಳಿದ ಅರ್ಧ ಆಸ್ತಿಯಲ್ಲಿ ಪ್ರತಿವಾದಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ 1980 ರಲ್ಲಿ ರಿಲೀಸ್ ಪತ್ರ ಮಾಡಿದ್ದು ಆ ಪತ್ರದ ಮೂಲಕ ಪ್ರತಿವಾದಿಗೆ ದಾವಾ ಐಟಂ.ನಂ.1 ರಲ್ಲಿ ಅರ್ಧ ಆಸ್ತಿ ಆತನಿಗೆ ಹೋಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಐಟಂ.ನಂ.2, 1980 ರಲ್ಲಿ ಆದ ರಿಲೀಸ್ ಪತ್ರದ ಮೂಲಕ 1 ಎಕರೆ 6 ಗುಂಟೆ ಪ್ರತಿವಾದಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ದಾವಾ ಐಟಂ.ನಂ.2 ರಲ್ಲಿ 1 ಎಕರೆ 6 ಗುಂಟೆ ಜಮೀನನ್ನು ನನ್ನ ಚಿಕ್ಕಪ್ಪ ಹನುಮಂತಪ್ಪನವರಿಗೆ ಬಂದ ಭಾಗವನ್ನು ಪ್ರತಿವಾದಿ ಕ್ರಯಪತ್ರದ ಮೂಲಕ ಖರೀದಿಸಿದ್ದಾರೆ ಎಂದರೆ ಸರಿ.

7. ದಾವಾ ಐಟಂ.ನಂ.2 ರ ಅರ್ಧ ಆಸ್ತಿಯಲ್ಲಿ ಪ್ರತಿವಾದಿ ಸ್ವಾಧೀನದಲ್ಲಿದ್ದು ಆತನೇ ಆ ಆಸ್ತಿಯ ಮಾಲಿಕ ಎಂದರೆ ಸರಿಯಲ್ಲ. ದಾವಾ ಐಟಂ.ನಂ.3 ರ ಪ್ರತಿವಾದಿಯ ಸ್ವಂತ ಆಸ್ತಿ ಎಂದರೆ ಸುಳ್ಳು, ದಾವಾ ಐಟಂ.ನಂ.4 ಪ್ರತಿವಾದಿಗೆ ಸರ್ಕಾರದಿಂದ ಮಂಜೂರಾಗಿತ್ತು ಎಂದರೆ ಸರಿಯಲ್ಲ. ದಾವಾ ಐಟಂ.ನಂ.4 ರ ಮಾಲಿಕ ಪ್ರತಿವಾದಿಯಾಗಿದ್ದು ಆ ಆಸ್ತಿಗೂ ನನಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಾವಾ ಐಟಂ.ನಂ.5 ರಲ್ಲಿ ನಾನು ಸ್ವಾಧೀನದಲ್ಲಿದ್ದು ನಾನೇ ಆಸ್ತಿಯ ಮಾಲಿಕ ಎಂದರೆ ಸುಳ್ಳು

**ಮುಂದುವರೆದ ಪಾಟೀ ಸವಾಲಿಗೆ ಸಮಯಕೋರಿದ್ದು ಮುಂದೂಡಲಾಯಿತು.**

ನನ್ನ ಉಕ್ತಲೇಖನದ ರೀತ್ಯಾತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೆ.ಕೇ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿಂತಾಮಣಿ